ಕಲೆಸುವಂತಹ ಕೆಲಸ ಮಾಡಿ ಎಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: O K ಮಾನ್ಯ ಸಚಿವರೆ ತಾವು ನೋಡಿ

ಶ್ರೀ ಟಿ ಬಿ ಜಯಚಂದ್ರ ಮಾನ್ಯ ಸದಸ್ಯರು ಈ ವಿಷಯವನ್ನು ಈಗ ನನ್ನ ಗಮನಕ್ಕೆ ತಂದಿದ್ದೀರಿ ನೇರವಾಗಿ ಅದು ಏನಿದೆ ಎಂದು ಬರೆದುಕೊಟ್ಟರೆ ಅವರು ಯಾರು ಈ ರೀತಿಯಾಗಿ ಶಾಮೀಲಾಗಿದ್ದಾರೆನ್ನುವಂತಹ ಪ್ರಕರಣಗಳು ಇದ್ದರೆ ಇವತ್ತೆ ಕ್ರಮ ತೆಗೆದುಕೊಳ್ಳುತ್ತೇನೆ.

6) ವಿಷಯ: ಧಾರವಾಡ ಜಿಲ್ಲೆಯ ನವಲಗುಂದ ನಗರಕ್ಕೆ ಒಂದು ಅಗ್ನಿಶಾಮಕ ಠಾಣೆ ಸ್ಥಾಪನೆಗೆ ತುರ್ತಾಗಿ ಮಂಜೂರಾತಿ ಮಾಡುವ ಬಗ್ಗೆ

ಶ್ರೀ ಎನ್.ಹೆಚ್. ಕೋನರೆಡ್ಡಿ (ನವಲಗುಂದ): ಧಾರವಾಡ ಜಿಲ್ಲೆಯ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನವಲಗುಂದ ನಗರವು ತಾಲ್ಲೂಕು ಕೇಂದ್ರ ಸ್ಥಾನವಾಗಿದ್ದು, ಇಲ್ಲಿಯವರೆಗೂ ಅಗ್ನಿಶಾಮಕ ಠಾಣೆ ಇಲ್ಲದಿರುವುದರಿಂದ ಸುತ್ತಮುತ್ತಲೂ 30 ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ಅಗ್ನಿಶಾಮಕ ಠಾಣೆ ಇಲ್ಲದಿರುವುದರಿಂದ ಈ ಭಾಗದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ನವಲಗುಂದ ಪಟ್ಟಣಕ್ಕೆ ತುರ್ತಾಗಿ ಹೊಸದಾಗಿ ಅಗ್ನಿಶಾಮಕ ಠಾಣೆ ಮಂಜೂರು ಮಾಡುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಜೆ ಜಾರ್ಜ್ (ಮಾನ್ಯ ಗೃಹಸಚಿವರು): ಮಾನ್ಯ ಅಧ್ಯಕ್ಷರೆ, ಈ ಹಿಂದೆ L-SAFE 2010 ಯೋಜನೆಯಡಿಯಲ್ಲಿ ನವಲಗುಂದಕ್ಕೆ ಒಂದು ಅಗ್ನಿಶಾಮಕ ಠಾಣೆ ಸ್ಥಾಮನೆಗೆ ಮಂಜೂರಾತಿ ನೀಡಲಾಗಿತ್ತು ನಂತರ ಅಲ್ಲಿ ಯಾವುದೇ ಜಮೀನು ಲಭ್ಯವಾಗದೇ ಇದ್ದ ಕಾರಣ, ನವಲಗುಂದ ತಾಲ್ಲೂಕಿನ ಅಣ್ಣಿಗೇರೆ, ಹೋಬಳಿ ಕೇಂದ್ರ ಸ್ಥಾನವಾಗಿದ್ದು ಅಲ್ಲಿ ಜಮೀನು ಲಭ್ಯವಿದ್ದ ಕಾರಣ ಅಲ್ಲಿ ಅಗ್ನಿಶಾಮಕ ಠಾಣೆಯನ್ನು ತೆರೆಯಲಾಯಿತು ಅಣ್ಣಿಗೇರಿಯು ನವಲಗುಂದದಿಂದ ಸುಮಾರು 17 ಕಿ.ಮೀ. ಅಂತರದಲ್ಲಿರುತ್ತದೆ. ಆದಾಗ್ಯೂ ನವಲಗುಂದದಲ್ಲಿ ಸೂಕ್ತವಾದ ಜಮೀನು ಲಭ್ಯವಾದಲ್ಲಿ, ಅಲ್ಲಿಯೂ ಸಹ

ಅಗ್ನಿಶಾಮಕ ಠಾಣೆಯನ್ನು ತೆರೆಯುವ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸಲಾಗುವುದು

ಶ್ರೀ ಎನ್ ಹೆಚ್ ಕೋನರೆಡ್ಡಿ: APMC ಜಾಗದಲ್ಲಿ ಕೊಡಬೇಕೆಂದು ನಿರ್ಣಯ ಮಾಡಬೇಕು.

7) ವಿಷಯ: ಸರ್ವೆ ನಂಬರ್ 40 ಹಾಗು 48 ರಲ್ಲಿ ಜೀತವಿಮುಕ್ತರಿಗೆ ಮಂಜೂರಾಗಿರುವ ಭೂಮಿಯನ್ನು ರದ್ದು ಪಡಿಸಲು ಕೋರಿರುವ ಬಗ್ಗೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ): ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರದ ಸಕಲೇಶಪುರ ತಾಲ್ಲೂಕಿನ ಬೆಳೆಗೋಡು ಹೋಬಳಿ, ಕೊಳದಂಡೆ ಗ್ರಾಮ ಸರ್ವೆ ನಂಬರ್ 40 ರಲ್ಲಿ ಸುಮಾರು 100 ಜನಕ್ಕೆ ನಿವೇಶನ ಪತ್ರವನ್ನು 1994 ರಲ್ಲಿ ಹಂಚಿದ್ದಾರೆ. ಆದರೆ ಅರಕಲಗೂಡು ತಾಲ್ಲೂಕಿನ ಗಂಗೂರು ಗ್ರಾಮದ ಜೀತ ವಿಮುಕ್ತರಿಗೆ ಅದೇ ಜಮೀನನ್ನು ಡಿಸಿಯವರು ಮಂಜೂರು ಮಾಡಿದ್ದಾರೆ. ಜೀತ ವಿಮುಕ್ತರಿಗೆ ಜಮೀನು ಮಂಜೂರು ಮಾಡಿರುವ ಬಗ್ಗೆ ನನ್ನ ವಿರೋಧವಿಲ್ಲ ಸ್ವಾಧೀನದಲ್ಲಿರುವ, ಹಕ್ಕುಪತ್ರ ಕೊಟ್ಟಿರುವ ನಿವೇಶನದ ಜಾಗದಲ್ಲಿ ಮಂಜೂರು ಮಾಡಿದರೆ ಎಷ್ಟರಮಟ್ಟಿಗೆ ಇದು ಸರಿಯೆನಿಸುತ್ತದೆ ಹೇಳಿ. ಆದಕಾರಣ ಆ ಮಂಜೂರಾತಿ ರದ್ದಾಗಬೇಕು. ಇನ್ನೊಂದು ಹೊಸಗದ್ದೆ ಎಂಬ ಜಾಗದಲ್ಲಿ ಸರ್ವೆ ನಂಬರ್ 48 ರಲ್ಲಿ ಅದರಲ್ಲಿ ಅರ್ಧ ಎಕರೆ, 10 ಗುಂಟೆ, 20 ಗುಂಟೆ ಈ ರೀತಿ ಸುಮಾರು 21 ಜನ ಸ್ವಾಧೀನದಲ್ಲಿದ್ದಾರೆ. ಅವರನ್ನು ತೆರವು ಮಾಡಿಸಿ ಅಲ್ಲಿಯೂ ಕೂಡ ಮಂಜೂರು ಮಾಡಿದ್ದಾರೆ. ದಯಮಾಡಿ ಈ ಮಂಜೂರಾತಿಯನ್ನು ರದ್ದು ಮಾಡಬೇಕೆಂದು ಮಾನ್ಯ ಕಂದಾಯ ಸಚಿವರಲ್ಲಿ ನಾನು ಒತ್ತಾಯ ಮಾಡುತ್ತೇನೆ

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಈಗ ಪ್ರಸ್ತಾಪಿಸಿರುವ ಸಕಲೇಶಪುರ ತಾಲ್ಲೂಕಿನ ಕೊಳದಂಡೆ ಗ್ರಾಮದ ಸರ್ವೆ ನಂಬರ್ 40 ರ ಹೊಸಗದ್ದೆ ಸರ್ವೆ ನಂಬರ್